ದಿನಾಂಕಃ 12-09-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಂ ಟಿ ಎಸ್ ವಕೀಲರಿಂದಃ

1972 ರಲ್ಲಿ ಕ್ರಯಕ್ಕೆ ಕೊಂಡ ಆಸ್ತಿಯ ಚೆಕ್ಕುಬಂದಿ ಪೂರ್ವಕ್ಕೆ ಪಂಚಾಯತಿ ರಸ್ತೆ, ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ ಹಾದಮ್ ಸಾಹೇಬರವರ ಬಿಲ್ಡಿಂಗ್ , ದಕ್ಷಿಣಕ್ಕೆ ಶಂಕರಪ್ಪನವರ ಅಸ್ತಿ. ದಕ್ಷಿಣಕ್ಕೆ ಶಂಕರಪ್ಪನವರ ಅಸ್ತಿಯಲ್ಲಿ ಈಗ ಪ್ರಸ್ತುತ ಆನಂದರಾಮ್ ರವರು ವಾಸವಿದ್ದಾರೆ. ನಾನು ದಾವಾ ಖಾನೆ ಸುಮಾರಿ ನಂ ಆಸ್ತಿಯನ್ನು ನಾನು ಖರೀದಿಸಿದ ಸಮಯಕ್ಕೆ ಪೂರ್ವ-ಪಶ್ಚಿಮವಾಗಿ 100 ಅಡಿ ಖಾಲಿ ಜಾಗ ಅಳತೆ ಇತ್ತು. ಸದರಿ ಖಾಲಿ ಜಾಗದಲ್ಲಿ ನನ್ನ ತಂದೆ ಮೊದಲ ಬಾರಿಗೆ 1973 ರಲ್ಲಿ ಕಟ್ಟಡವನ್ನು ಕಟ್ಟಿರುತ್ತಾರೆ. ಸದರಿ ಕಟ್ಟಡದ ಪೂರ್ವ-ಪಶ್ಚಿಮ 100 ಅಡಿ, ಉತ್ತರ-ದಕ್ಷಿಣ 25 ಅಡಿ ಇತ್ತು. ಸದರಿ ಕಟ್ಟಡ ಈಗಲೂ ಸಹ ಇದೆ. ಸದರಿ ಕಟ್ಟಡದ ಪಶ್ಚಿಮಕ್ಕೆ ಹಿಂಬಾಗಿಲು ಇದೆ ಎಂದರೆ ಸರಿ. ಹಾಗಾಗಿ ಸದರಿ ಕಟ್ಟಡದ ಪಶ್ಚಿಮದಲ್ಲಿರುವ ಬಾಗಿಲಿನ ಮೂಲಕ ಹೋದರೆ ಪಶ್ಚಿಮ ದಿಕ್ಕಿನಲ್ಲಿರುವ ದಾರಿಯನ್ನು ತಲುಪಬಹುದು ಎಂದರೆ ಸರಿ. ನನ್ನ ತಂದೆ ನಿರ್ಮಾಣ ಮಾಡಿ ಸದರಿ ಕಟ್ಟಡದ ಉತ್ತರ ದಿಕ್ಕಿನ ಗೋಡೆಯಲ್ಲಿ ಯಾವುದೇ ಕಿಟಕಿಗಳಾಗಲಿ ಅಥವಾ ಬಾಗಿಲುಗಳಾಗಲಿ ಇಲ್ಲ ಎಂದರೆ ಸರಿ. ಸದರಿ 100 ಅಡಿ ಕಟ್ಟಡದ ಪಶ್ಚಿಮಕ್ಕೆ ಇರುವ ದಾರಿಗೂ ಮತ್ತು ನಮ್ಮಕಟ್ಟಡಕ್ಕು ನಡುವೆ ಹಿತ್ತಲು ಜಾಗವನ್ನು ಬಿಟ್ಟುಕೊಂಡಿರುತ್ತೇವೆ. ಸದರಿ ಹಿತ್ತಲಿಗೆ ನಮ್ಮ ಮನೆಯ ಪಶ್ಚಿಮದಲ್ಲಿರುವ ಬಾಗಿಲಿನ ಮೂಲಕ ಹೋಗುತ್ತಿದ್ದೆವು ಎಂದರೆ ಸರಿ.

ನಮ್ಮ ತಂದೆಗೆ ಇಬ್ಬರು ಸಹೋದರರು, ನನ್ನ ತಂದೆ ಮತ್ತು ಆತನ ಸಹೋದರರು 1972 ರಲ್ಲಿಯೇ ವಿಭಾಗ ಮಾಡಿಕೊಂಡು ಪ್ರತ್ಯೇಕವಾಗಿದ್ದರು. 1972 ರಲ್ಲಿ ವಿಭಾಗವಾದ ಕುರಿತು ಯಾವುದೇ ದಾಖಲೆ ಇಲ್ಲ. ನನ್ನ ಚಿಕ್ಕಪ್ಪನಾದ ದತ್ತುರಾವ್ 1972 ಕ್ಕಿಂತ ಪೂರ್ವದಲ್ಲಿಯೇ ವಿಭಾಗಮಾಡಿಕೊಂಡು ಪ್ರತ್ಯೇಕವಾಗಿ ವಾಸಿಸುತ್ತಿದ್ದರು. ನನ್ನ ತಂದೆ ಮತ್ತು ಮತ್ತು ಆತನ ಇನ್ನೊಬ್ಬ ಸಹೋದರನಾದ ಹಾಲೇಶ್ ರಾವ್‌ರವರು ಒಟ್ಟು ಕುಟುಂಬದಲ್ಲಿ ಮುಂದುವರೆಯುತ್ತಿದ್ದರು. ಸದರಿಯವರು 1972 ರಲ್ಲಿ ವಿಭಾಗಮಾಡಿಕೊಂಡಿರುತ್ತಾರೆ. ಸದರಿ ವಿಭಾಗ ಮಾಡಿಕೊಂಡ ಕುರಿತು ಯಾವುದೇ ದಾಖಲೆ ಇರುವುದಿಲ್ಲ. ಹಾಗಾಗಿ ಸದರಿ ವಿಭಾಗದಲ್ಲಿ ನನ್ನ ತಂದೆಗೆ ಮತ್ತು ಹಾಲೇಶ್ ರಾವ್ ರವರಿಗೆ ಎಷ್ಟು ಎಷ್ಟು ಅಳತೆಯ ಆಸ್ತಿ ಬಂತು ಎಂದರೆ ಸಾಕ್ಷಿ ನನಗೆ ಅಳತೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಹಾಗಾಗಿ ನನ್ನ ತಂದೆ ಕಟ್ಟಿದ 100 ಇಂಟು 25 ಅಡಿಯ ಮನೆಯ ಆಸ್ತಿಯನ್ನು ನನ್ನ ಚಿಕ್ಕಪ್ಪನಾದ ಹಾಲೇಶ್ ರಾವ್

ರವರಿಗೆ ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸರಿ. ಸದರಿ ಆಸ್ತಿಯ ಖಾನೆ ಸುಮಾರಿ ನಂ ನನಗೆ ಗೊತ್ತಿಲ್ಲ. ಪ್ರಸ್ತುತ ದಾವೆ ಹೂಡಿರುವ ದಾವಾಸ್ತಿಯ ಖಾನೆ ಸುಮಾರಿ ನಂ 73 ಎಂದರೆ ಸರಿ.

ನಮ್ಮ ತಂದೆಗೆ ಒಟ್ಟು 7 ಜನ ಮಕ್ಕಳಿದ್ದು ಅದರಲ್ಲಿ 3 ಜನ ಗಂಡುಮಕ್ಕಳು, 4 ಜನ ಹೆಣ್ಣುಮಕ್ಕಳು. ನಾವು 3 ಜನ ಗಂಡುಮಕ್ಕಳಾದ ನಾನು, ಅನಂತಮೂರ್ತಿ ಮತ್ತು ಕೇಶವಮೂರ್ತಿರವರು ಸುಮಾರು 10 ವರ್ಷಗಳಿಂದ ಪ್ರತ್ಯೇಕವಾಗಿದ್ದೇವೆ. ನನ್ನ ತಂದೆಯ ಅಸ್ತಿಯನ್ನು ನಾನು ಮತ್ತು ಅನಂತಮೂರ್ತಿ ಸೇರಿ ವಿಭಾಗ ಮಾಡಿಕೊಂಡಿದ್ದು, ಕೇಶವಮೂರ್ತಿ ಯಾವುದೇ ವಿಭಾಗ ಮಾಡಿಕೊಂಡಿರುವುದಿಲ್ಲ. ಸದರಿ ಕೇಶವಮೂರ್ತಿರವರು ಮತ್ತು 4 ಜನ ಹೆಣ್ಣುಮಕ್ಕಳಾಗಲಿ ನನ್ನ ತಂದೆಯ ಅಸ್ತಿಯಲ್ಲಿ ಯಾವುದೇ ಆಸ್ತಿ ಬೇಡವೆಂದು ಹಕ್ಕು ಖುಲಾಸೆ ಪತ್ರವನ್ನು ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿ. ಹಾಗಾಗಿ ಕಾನೂನು ರೀತ್ಯ ನನ್ನ ತಂದೆಯ ಆಸ್ತಿಗೆ ಅವರ ಎಲ್ಲಾ ಮಕ್ಕಳು ಸಹ ಪಾಲುದಾರರು ಎಂದರೆ ಸರಿ. ನಾನು ಮತ್ತು ಅನಂತಮೂರ್ತಿರವರು ಮಾಡಿಕೊಂಡ ವಿಭಾಗದ ಕುರಿತು ಹಿಸ್ಸಾ ಪತ್ರ ಇದೆ. ಸದರಿ ಪತ್ರ ನನ್ನ ಬಳಿ ಇದೆ ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಸದರಿ ವಿಭಾಗವನ್ನು ನಾವು 2021-22 ರಲ್ಲಿ ಮಾಡಿಕೊಂಡಿರುತ್ತೇವೆ. ಸದರಿ ವಿಭಾಗ ಮಾಡಿಕೊಂಡ ವಿಚಾರವನ್ನು ನನ್ನ ದಾವಾ ಪತ್ರದಲ್ಲಿ ಮತ್ತು ನನ್ನ ಮುಖ್ಯ ವಿಚಾರಣಾ ಪ್ರ.ಪತ್ರದಲ್ಲಾಗಲಿ ನಮೂದಿಸಿರುವುದಿಲ್ಲ ಎಂದರೆ ಸರಿ.

ನಿಪಿ-2 ರಲ್ಲಿ ಬರೆದವಿಚಾರ ನನಗೆ ಗೊತ್ತಿದೆ. ಸದರಿ ದಾಖಲೆಯಂತೆ ಮಾಡಿದ ಹಕ್ಕು ಬದಲಾವಣೆಯನ್ನು ಯಾವ ದಾಖಲೆಯಾಧಾರದ ಮೇಲೆ ಬರೆದಿರುತ್ತಾರೆ ಎಂದರೆ ಸಾಕ್ಷಿ ಯಾವುದೇ ದಾಖಲೆ ಇಲ್ಲ ಎಂದು ನುಡಿಯುತ್ತಾರೆ. ಹಾಗಾಗಿ ಪಂಚಾಯತಿಯವರು ನಾವು ಖಾತೆ ಬದಲಾವಣೆಗಾಗಿ ನೀಡಿದ ಮನವಿಯಾಧರದ ಮೇಲೆ ಖಾತೆ ಬದಲಾಯಿಸಿರುತ್ತಾರೆ ಹೊರತು ಯಾವುದೇ ದಾಖಲೆಗಳ ಆಧಾರದ ಮೇಲೆ ಅಲ್ಲ ಎಂದರೆ ಸರಿ. ಅದರಂತೆ ನಿಪಿ-2 ರಲ್ಲಿ ನಮೂದಿಸಿದ ಚೆಕ್ಕುಬಂದಿಗಳು ಸಹ ನಾವು ಮನವಿಯಲ್ಲಿ ನಮೂದು ಮಾಡಿಕೊಟ್ಟ ಚೆಕ್ಕುಬಂದಿಗಳೇ ಆಗಿರುತ್ತವೆ. ಹಾಗಾಗಿ ಸದರಿ ಚೆಕ್ಕುಬಂದಿಗಳ ಕುರಿತು ಅಥವಾ ಅಳತೆಯ ಕುರಿತು ಯಾವುದೇ ಅಧಿಕೃತ ದಾಖಲೆಗಳು ಇಲ್ಲ ಎಂದರೆ ಸರಿ. ಹಾಗಾಗಿ ನಾನು ಈ ದಾವೆಯನ್ನು ಪಂಚಾಯತಿಗೆ ಸಲ್ಲಿಸಿದ ಮನವಿಯಲ್ಲಿ ತೋರಿಸಿದ ಚೆಕ್ಕುಬಂದಿ ಮತ್ತು ಅಳತೆಗಳ ಆಧಾರದ ಮೇಲೆ ಈ ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿ. ಹಾಗಾಗಿ ನನ್ನ ಮನವಿ ಪತ್ರದಲ್ಲಿ ನನ್ನ ಅನುಕೂಲಕ್ಕೆ ತಕ್ಕಂತೆ ಅಳತೆಯನ್ನು ಮತ್ತು ಚೆಕ್ಕುಬಂದಿಯನ್ನು

ನಮೂದಿಸಿರುತ್ತೇನೆ ಎಂದರೆ ಸರಿಯಲ್ಲ. ಹಾಗಾಗಿ 1 ಮತ್ತು 2 ದಾವಾಸ್ತಿಯಲ್ಲಿ ತೋರಿಸಿದ ಉತ್ತರ ದಿಕ್ಕಿನ ಚೆಕ್ಕುಬಂದಿಯಂತೆ 3 ಅಡಿ ಜಾಗ ನಮಗೆ ಇರದೆ ಇದ್ದರು ಸಹ ಬರೆದಿರುತ್ತೇವೆ ಎಂದರೆ ಸರಿಯಲ್ಲ. ಸದರಿ 3 ಅಡಿ ಖಾಲಿ ಜಾಗದ ಬಗ್ಗೆ ಯಾವುದೇ ದಾಖಲೆಗಳು ಇಲ್ಲ ಎಂದರೆ ಸರಿ. ಸದರಿ ಪೂರ್ವ-ಪಶ್ಚಿಮವಾಗಿದ್ದ 100 ಅಡಿ ಒಟ್ಟು ಜಾಗದಲ್ಲಿ ನನ್ನ ಹಿಸ್ಸೆಗೆ 42 ವರೆ ಅಡಿ ಜಾಗ ಬಂದಿರುತ್ತದೆ. ಅದರ ಪಶ್ಚಿಮಕ್ಕೆ ನನ್ನ ತಮ್ಮನ ಹಿಸ್ಸೆಗೆ 42 ವರೆ ಜಾಗ ಇರುತ್ತದೆ. ಅದರಂತೆ ಉತ್ತರ-ದಕ್ಷಿಣವಾಗಿ 12 ವರೆ ಜಾಗವನ್ನು ತೆಗೆದುಕೊಂಡಿರುತ್ತೇವೆ.

ನಾನು 1 ನೇ ದಾವಾ ಷೆಡ್ಯೂಲ್ ನಲ್ಲಿ ತೋರಿಸಿರುವ ಉತ್ತರ – ದಕ್ಷಿಣ 6 ಕಾಲು ಅಡಿ ಆಸ್ತಿಗೂ ಮತ್ತು 2 ನೇ ದಾವಾಸ್ತಿಯಲ್ಲಿ ಉತ್ತರ-ದಕ್ಷಿಣ 12 ವರೆ ಅಡಿ ತೋರಿಸಿರುವ ಆಸ್ತಿಗೂ ಯಾವ ರೀತಿ ಹೊಂದಿಕೊಂಡಿದೆ ಎಂದರೆ ಸಾಕ್ಷಿ ಉತ್ತರ-ದಕ್ಷಿಣವಾಗಿ ಹೊಂದಿಕೊಂಡಿದೆ ಎಂದು ನುಡಿಯುತ್ತಾರೆ. ನಿಪಿ-3 ರ 2 ನೇ ಪುಟದ ಕೊನೆಯ ಸಾಲಿನಲ್ಲಿ ನಮೂದಿಸಿರುವ ಬರವಣಿಗೆ ಮತ್ತು ಅದರ ಮೇಲೆ ನಮೂದಿಸಿರುವ ಬರವಣಿಗೆ ಎರಡೂ ಬೇರೆ ಬೇರೆ ಇದೆ ಎಂದರೆ ಸರಿ. ಸದರಿ ಬರವಣಿಗೆ ಬೇರೆ ಬೇರೆ ಯಾವ ರೀತಿಯಾಯಿತು , ಯಾವ ಕಾರಣಕ್ಕಾಗಿ ಆಯಿತು ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಯಾವುದೇ ಆಸ್ತಿಯ ಕ್ರಯಪತ್ರ ನೊಂದಣಿಯಾದರೆ ಸದರಿ ಪತ್ರದ ನಕಲು ನೊಂದಣಿಕಚೇರಿಯಲ್ಲಿ ದೊರೆಯುತ್ತದೆ ಎಂದರೆ ಸರಿ.

ಈ ದಾವೆಗೆ ಪ್ರತಿವಾದಿಗಳು ಸಲ್ಲಿಸಿರುವ ದಾಖಲೆಗಳ ಬಗ್ಗೆ ನಾನು ತಿಳಿದುಕೊಂಡಿರುತ್ತೇನೆ. ಅದರಂತೆ 23-10-1972 ರಲ್ಲಿ ಆದಕರಯಪತ್ರದ ನೊಂದಾಯಿತ ಕರಯಪತ್ರದ ಪ್ರಮಾಣಿತ ಪ್ರತಿಯನ್ನು ಸಂಬಂಧಪಟ್ಟ ಕಚೇರಿಯಿಂದ ಪಡೆದು ನ್ಯಾಯಲಾಯಕ್ಕೆ ಹಾಜರುಪಡಿಸಿರುತ್ತಾರೆ ಎಂದರೆ ಸರಿ. ಸಾಕ್ಷಿಗೆ ಈಗ ಕಡತದಲ್ಲಿನ ನೊಂದಾಯಿತ ಪ್ರಮಾಣಿತ ಪ್ರತಿಯನ್ನು ನೋಡಿ ಗುರುತಿಸಿ ಒಪ್ಪಿದ್ದು ಅದನ್ನು ನಿಡಿ-1 ಎಂದು ಗುರುತಿಸಲಾಯಿತು.

(ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು).

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

02 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಚನ್ನಗಿರಿ

ಮತ್ತು ಜೆಎಂಎಫ್‌ಸಿ. ಚನ್ನಗಿರಿ.